**<u>1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ</u>**

**<u>ವಿಶೇಷ ಮೊಕದ್ದಮೆ ಸಂಖ್ಯೆಃ- 471/2023</u>**

**ಪ್ರಾಸಾಃ- 12 ಚಾಸಾಃ- 13**

| | | |
|---|---|---|
| ಸಾಕ್ಷಿಯ ಹೆಸರು | : | ಜಿ.ಬಸವರೆಡ್ಡಿ |
| ತಂದೆಯ ಹೆಸರು | : | ಲೇಟ್ ಜಿ.ತಿಮ್ಮಾರೆಡ್ಡಿ |
| ವಯಸ್ಸು | : | 56 ವರ್ಷ |
| ವೃತ್ತಿ | : | ಎ ಇ ಇ, ಪಿ ಡಬ್ಲ್ಯೂ ಡಿ, ಬಳ್ಳಾರಿ |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 7.1.2026**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನಾನು 1-7-2010 ರಿಂದ 20-9-2023 ರವರೆಗೆ ಸಹಾಯಕ ಇಂಜನೀಯರ್ ಎಂದು ಪಿಡಬ್ಲ್ಯೂಡಿ, ಬಳ್ಳಾರಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 28-11-2022 ರಂದು ಡಿ ವೈ ಎಸ್ ಪಿ ಬಳ್ಳಾರಿ ಸಿಟಿ ರವರು ನಮ್ಮ ಕಚೇರಿಗೆ ಈ ಪ್ರಕರಣದಲ್ಲಿನ ಕೃತ್ಯ ಸ್ಥಳಗಳ ನಕಾಶೆಯನ್ನು ತಯಾರಿಸಿಕೊಡುವಂತೆ ಮನವಿ ಪತ್ರವನ್ನು ನೀಡಿದ್ದರು. ಅದನ್ನು ನಮ್ಮ ಕಚೇರಿಯಲ್ಲಿ ದಿಃ 29-11-2022 ರಂದು ಪಡೆದುಕೊಂಡಿದ್ದೆವು. ಸಾಕ್ಷಿ ಗುರುತಿಸಿದ ಮನವಿ ಪತ್ರವನ್ನು ನಿಪಿ-25 ಎಂದು ಗುರುತಿಸಲಾಯಿತು.

ದಿಃ 3-12-2022 ರಂದು ನಾನು ಚಾಸಾ 22 ರವರು ತೋರಿಸಿದ ಕೃತ್ಯ ಸ್ಥಳಗಳಿಗೆ ಭೇಟಿ ನೀಡಿದ್ದೆ. ಮೊದಲನೇ ಕೃತ್ಯ ಸ್ಥಳವಾದ ಕೆ ಎಸ್ ಆರ್ ಟಿ ಸಿ 3 ನೇ ಡಿಪೋದ ಆವರಣಕ್ಕೆ ಭೇಟಿ ನೀಡಿ ಅಲ್ಲಿನ ಸ್ಥಿತಿ ಗತಿಗಳ ಬಗ್ಗೆ ನಕಾಶೆಯನ್ನು ತಯಾರಿಸಿ ತನಿಖಾಧಿಕಾರಿಗಳಿಗೆ ನೀಡಿದ್ದೆ. ಸಾಕ್ಷಿ ಗುರುತಿಸಿದ ಸದರಿ ನಕಾಶೆಯನ್ನು ನಿಪಿ-26 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-26(ಎ) ಎಂದು ಗುರುತಿಸಲಾಯಿತು. ಸದರಿ ಸ್ಥಳಕ್ಕೆ ಭೇಟಿ ನೀಡಿದ ಬಗ್ಗೆ ಜಿ ಪಿ ಎಸ್

ಭಾವಚಿತ್ರವನ್ನು ಸಹ ನೀಡಿದ್ದೆ. ಸದರಿ ಜಿ ಪಿ ಎಸ್ ಭಾವಚಿತ್ರವನ್ನು ನಿಪಿ-27 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-27(ಎ) ಎಂದು ಗುರುತಿಸಲಾಯಿತು.

ನಂತರ ವಿದ್ಯಾನಗರದ ನವಜೀವನ ಡಿಆಬಿಲಿಟೇಷನ್ ಸೆಂಟರ್ ಬಳಿ ಚಾಸಾ 22 ತೋರಿಸಿದ ಕೃತ್ಯ ಸ್ಥಳಕ್ಕೆ ಭೇಟಿ ನೀಡಿ ಅಲ್ಲಿನ ಸ್ಥಿತಿ ಗತಿಗಳ ಬಗ್ಗೆ ನಕಾಶೆಯನ್ನು ತಯಾರಿಸಿ ತನಿಖಾಧಿಕಾರಿಗಳಿಗೆ ನೀಡಿದ್ದೆ. ಸಾಕ್ಷಿ ಗುರುತಿಸಿದ ಸದರಿ ನಕಾಶೆಯನ್ನು ನಿಪಿ-28 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-28(ಎ) ಎಂದು ಗುರುತಿಸಲಾಯಿತು. ಸದರಿ ಸ್ಥಳಕ್ಕೆ ಭೇಟಿ ನೀಡಿದ ಬಗ್ಗೆ ಜಿ ಪಿ ಎಸ್ ಭಾವಚಿತ್ರವನ್ನು ಸಹ ನೀಡಿದ್ದೆ. ಸದರಿ ಜಿ ಪಿ ಎಸ್ ಭಾವಚಿತ್ರವನ್ನು ನಿಪಿ-29 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-29(ಎ) ಎಂದು ಗುರುತಿಸಲಾಯಿತು.

ದಿಃ 27-12-2022 ರಂದು ನಿಪಿ-26 ರಿಂದ 29 ದಾಖಲೆಗಳನ್ನು ನಮ್ಮ ಕಚೇರಿಯ ಪತ್ರದೊಂದಿಗೆ ಡಿ ವೈ ಎಸ್ ಪಿ ರವರಿಗೆ ಕಳುಹಿಸಿಕೊಟ್ಟಿದ್ದೆವು. ಸಾಕ್ಷಿ ಗುರುತಿಸಿದ ಪತ್ರವನ್ನು ನಿಪಿ-30 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್ ಆರ್ ಎಸ್ ವಕೀಲರಿಂದಃ</u>**

ಎರಡೂ ಸ್ಥಳಗಳಿಗೆ ನಾನು ದಿಃ 3-12-2022 ರಂದು ಭೇಟಿ ನೀಡಿದ್ದೆ. ನಿಪಿ-27 ಮತ್ತು 29 ದಾಖಲೆಗಳಲ್ಲಿ ದಿಃ 12-3-2022 ಎಂದು ನಮೂದು ಇದೆ ಎಂದು ಸಾಕ್ಷಿಗೆ ಕೇಳಿದ ಪ್ರಶ್ನೆಗೆ ಸಾಕ್ಷಿಯು ಜಿ ಪಿ ಎಸ್ ನಲ್ಲಿ ತಿಂಗಳನ್ನು ಮೊದಲು ಮತ್ತು ದಿನಾಂಕವನ್ನು ನಂತರ ತೋರಿಸುತ್ತದೆ ಎಂದು ಹೇಳಿರುತ್ತಾರೆ. ಚಾಸಾ 22 ರವರು ಫೋಟೋಗಳಲ್ಲಿ ಕಾಣುತ್ತಿದ್ದಾರೆ. ಸ್ಥಳ ನಕಾಶೆಗಳಲ್ಲಿ ಚಾಸಾ 22 ರವರ ಸಹಿಯನ್ನು ಪಡೆದುಕೊಂಡಿಲ್ಲ. ಫೋಟೋಗಳಲ್ಲಿ ಕೆ ಎಸ್ ಆರ್ ಟಿ ಸಿ ಡಿಪೋ ಮತ್ತು ನವಜೀವನ ರಿಆಬಿಲೀಟೇಷನ್ ಸೆಂಟರ್ ಕಾಣುತ್ತಿಲ್ಲ ಎಂದರೆ ಸರಿ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ಸ್ಥಳಗಳಿಗೆ ಭೇಟಿ ನೀಡಿಲ್ಲ ಮತ್ತು ಅಲ್ಲಿ ಯಾವುದೇ ನಕಾಶೆಗಳನ್ನು ತಯಾರಿಸಿಲ್ಲ ಎಂದರೆ ಸರಿಯಲ್ಲ. ನಾನು ಬಳ್ಳಾರಿ

ಗ್ರಾಮಾಂತರ ಪೋಲೀಸ್ ಠಾಣೆಯ ಹಿಂಭಾಗದಲ್ಲಿ ಪೋಟೋಗಳನ್ನು ತೆಗೆದು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ. ಹೇ. ಕೆ. ಸರಿ ಇದೆ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**